ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/10/ಸಿಸಿಟೆಕ್/2017-18 /12776

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ: 14-01-2019 18

**-: ಸುತ್ತೋಲೆ :-**

ವಿಷಯ: ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸಿಸಿಟೆಕ್ ಉಪಘಟಕದ ವತಿಯಿಂದ ಆಯೋಜಿಸುವ ಅಲ್ಪಾವಧಿ ತರಬೇತಿಗಳಿಗೆ ಸಂಬಂಧಿಸಿದಂತೆ ಅನುಸರಿಬೇಕಾದ ನಿಯಮ(ನಿಬಂಧನೆ)/ಷರತ್ತುಗಳನ್ನು ಪಾಲಿಸುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಡಿಟಿಇ/10/ಸಿಸಿಟೆಕ್/2017-18/952, ದಿನಾಂಕ: 14-07-2017.
2. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಡಿಟಿಇ/26/ಸಿಸಿಟೆಕ್/2017-18, ದಿನಾಂಕ: 05-09-2017.
3. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಡಿಟಿಇ/01/ಸಿಡಿಸಿ(2)/2018-19/1132, ದಿನಾಂಕ: 06-07-2018.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1 ರಿಂದ 3)ರ ಈ ಕಛೇರಿ ಸುತ್ತೋಲೆಗಳಲ್ಲಿ ಈಗಾಗಲೇ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸಿಸಿಟೆಕ್ ಉಪಘಟಕದ ವತಿಯಿಂದ ಆಯೋಜಿಸುವ ಅಲ್ಪಾವಧಿ ತರಬೇತಿಗಳ ಸಂಬಂಧ ಸಂಸ್ಥೆಯ ಪ್ರಾಚಾರ್ಯರು ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಅನುಮೋದನೆ ಪಡೆಯಲು ಪ್ರಸ್ತಾವನೆ ಸಲ್ಲಿಸುವಾಗ ಈ ಕೆಳಕಂಡ ನಿಯಮ (ನಿಬಂಧನೆ)/ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಲು ಈ ಮೂಲಕ ಸೂಚಿಸಲಾಗಿದೆ.

1. ಸಂಸ್ಥೆಯ ಸಿಸಿಟೆಕ್ ಉಪಘಟಕದ ವತಿಯಿಂದ ಅಲ್ಪಾವಧಿ ತರಬೇತಿ ನಡೆಸುವ ಸಂಬಂಧ ಇಲಾಖೆಯಿಂದ ಅನುಮೋದನೆ ಪಡೆಯಲು ಸಲ್ಲಿಸುವ ಪ್ರಸ್ತಾವನೆ ಜೊತೆಯಲ್ಲಿ ಅರ್ಜಿ ನಮೂನೆ, ದಿನಾಂಕವನ್ನೊಳಗೊಂಡ ವೇಳಾಪಟ್ಟಿ, ಕೋರ್ಸಿನ ವಿಷಯ ಪರಿವಿಡಿ, ಸಂಪನ್ಮೂಲ ವ್ಯಕ್ತಿಗಳ ವೈಯಕ್ತಿಕ ಮಾಹಿತಿ (ರೆಸ್ಯೂಂ), ಸರ್ಕಾರದ ಇತರೆ ಯೋಜನೆಗಳಿಂದ ತರಬೇತಿಗೆ ನಿಯುಕ್ತಿಗೊಂಡ ಅಭ್ಯರ್ಥಿಗಳ ಆದೇಶ ಪ್ರತಿ ಇತ್ಯಾದಿ ವಿವರಗಳ ಮಾಹಿತಿಯನ್ನು ಕಡ್ಡಾಯವಾಗಿ ಕನ್ನಡದಲ್ಲೇ ನೀಡುವಂತೆ ಕ್ರಮ ವಹಿಸಿ, ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿದೆ.

2. ಅಲ್ಪಾವಧಿ ತರಬೇತಿಗೆ ಹಾಜರಾಗಲು ಇಚ್ಚಿಸುವ ಉಪನ್ಯಾಸಕರು ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರಿಂದ ಪ್ರಸ್ತುತ ಸೆಮಿಸ್ಟರ್‌ನಲ್ಲಿ ಒಂದು ತರಬೇತಿಗೆ ಮಾತ್ರ ಹಾಜರಾಗುತ್ತಿದ್ದಾರೆಂಬ ಶಿಫರಸ್ಸಿನೊಂದಿಗೆ ಅರ್ಜಿ ಸಲ್ಲಿಸಿ, ನೊಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

3. ಅಲ್ಪಾವಧಿ ತರಬೇತಿಗೆ ಸಂಬಂಧಿಸಿದ ವಿಷಯವನ್ನು ಬೋಧಿಸುವ ಉಪನ್ಯಾಸಕರನ್ನು ಅಧ್ಯತೆಯ ಮೇರೆಗೆ ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರಿಂದ ಪ್ರತಿ ವಿಭಾಗದಿಂದ ಒಬ್ಬರಂತೆ ಶಿಫಾರಸ್ಸುಗೊಂಡಿದ್ದರೆ ಮಾತ್ರ ಪರಿಗಣಿಸುವುದು.

4. ತರಬೇತಿ ನೀಡುವ ಸಂಸ್ಥೆಯ ಹೆಸರು ಮತ್ತು ಅಭ್ಯರ್ಥಿಗಳ ನೊಂದಣಿಯನ್ನು ಆಧಾರ್ ಕಾರ್ಡ್ ಸಂಖ್ಯೆಯ ಜೊತೆಯಲ್ಲಿ ಆನ್ ಲೈನ್ ಮೂಲಕ www.kaushalkar.com ನಲ್ಲಿ ಕಡ್ಡಾಯವಾಗಿ ನೊಂದಾಯಿಸುವುದು.

5. ತರಬೇತಿಗೆ ಹಾಜರಾಗಲು ಇಚ್ಚಿಸುವ ಉಪನ್ಯಾಸಕರು ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡಿರುವ (ಗರಿಷ್ಟ 30) ಅಭ್ಯರ್ಥಿಗಳ ಪಟ್ಟಿಗೆ ಒಂದು ವಾರ ಮುಂಚಿತವಾಗಿ ಇಲಾಖೆಯಿಂದ ಅನುಮೋದನೆ ಪಡೆಯುವುದು ಕಡ್ಡಾಯಗೊಳಿಸಿದೆ.

6. ತರಬೇತಿಗೆ ನಿಯೋಜಿಸಿರುವ ಉಪನ್ಯಾಸಕರಿಂದ ಸಂಸ್ಥೆಯ ದೈನಂದಿನ ಕೆಲಸಕಾರ್ಯಗಳಿಗೆ ತೊಂದರೆಯಾಗುವುದಿಲ್ಲವೆಂದು ಖಾತರಿ ಪಡಿಸಿಕೊಂಡು ಕಾರ್ಯವಿಮುಕ್ತಿಗೊಳಿಸುವುದು. ತರಬೇತಿ ಅವಧಿಯಲ್ಲಿ ಮತ್ತು ಮುಂದಿನ ದಿನಗಳಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಗಳು ಉಂಟಾಗದಂತೆ ಎಚ್ಚರಿಕೆ ವಹಿಸುವುದು ಹಾಗೂ ಮುಂದೆ ತರಬೇತಿಯ ಸಾದಕ ಬಾದಕಗಳಿಗೆ ಪ್ರಾಂಶುಪಾಲರು ನೇರ ಹೊಣೆಗಾರರಾಗುತ್ತಾರೆ.
7. ತರಬೇತಿ ನಡೆಯುವ ಕೊಠಡಿಯಲ್ಲಿ ಕಡ್ಡಾಯವಾಗಿ ಸಿ ಸಿ ಟಿವಿಯನ್ನು ಅಳವಡಿಸುವುದು ಮತ್ತು ತರಬೇತಿಗೆ ಹಾಜರಾದ ಅಭ್ಯರ್ಥಿಗಳನ್ನೊಳಗೊಂಡಂತೆ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಚಿತ್ರೀಕರಿಸುವುದು. ಕಾರ್ಯಕ್ರಮ ಪೂರ್ಣಗೊಂಡನಂತರ ಚಿತ್ರೀಕರಣದ ಸಿ ಡಿ ಯನ್ನು ಕೇಂದ್ರ ಕಛೇರಿಗೆ ತಪ್ಪದೆ ಸಲ್ಲಿಸತಕ್ಕದ್ದು.
8. ತರಬೇತಿ ನಡೆಯುವ ಸಮಯದಲ್ಲಿ ಉಪನ್ಯಾಸಕರಿಂದ ಪ್ರಾರಂಭದ ಸಮಯ ಮತ್ತು ಮುಕ್ತಾಯದ ಸಮಯ ಕಡ್ಡಾಯವಾಗಿ ಹಾಜರಾತಿಯಲ್ಲಿ ಎರಡು ಭಾರಿ ಸಹಿ ಪಡೆಯವುದು ಹಾಗೂ ತರಬೇತಿಗೆ ಹಾಜರಾದ ಅಭ್ಯರ್ಥಿಗಳಿಗೆ ಕಿರು ಪರೀಕ್ಷೆ ನಡೆಸಿ ಗುಣಮಟ್ಟ ಪರೀಕ್ಷಿಸುವುದು.
9. ತರಬೇತಿಯಲ್ಲಿ ಭಾಗವಹಿಸಿದ ಅಭ್ಯರ್ಥಿಗಳಿಗೆ ನೀಡುವ ತರಬೇತಿ ಪ್ರಮಾಣ ಪತ್ರವನ್ನು ಆಂಗ್ಲ ಭಾಷೆಯ ಜೊತೆಯಲ್ಲಿ ಕನ್ನಡವನ್ನು ಕಡ್ಡಾಯವಾಗಿ ನಮೂದಿಸಿ ನೀಡುವಂತೆ ಕ್ರಮ ವಹಿಸುವುದು ಹಾಗೂ ಸದರಿ ಮಾದರಿ ಪ್ರಮಾಣ ಪತ್ರಕ್ಕೆ ನಿರ್ದೇಶನಾಲಯದ ಅನುಮತಿಯನ್ನು ಕಡ್ಡಾಯವಾಗಿ ಪಡೆಯಲು ಸಹ ಸೂಚಿಸಲಾಗಿದೆ.
10. ತರಬೇತಿ ನಡೆಯುವ ಸಮಯದಲ್ಲಿ ಇಲಾಖೆ ಅಧಿಕಾರಿಗಳು ಬೇಟಿ ನೀಡಿದಾಗ ತರಬೇತಿ ಅಭ್ಯರ್ಥಿಗಳ ಹಾಜರಾತಿ ಹಾಗೂ ತರಬೇತಿಯ ಪೂರ್ಣಪ್ರಮಾಣದ ವಿವರಗಳ ದಾಖಲೆಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
11. ಸಿಸಿಟೆಕ್ ಉಪಘಟಕಗಳು ಇಲಾಖೆಯ ಅನುಮೋದನೆ ಪಡೆಯದೆ ನಡೆಸಿರುವ/ನಡೆಸುವ ಅಲ್ಪಾವಧಿ ತರಬೇತಿಗಳಿಗೆ ಇಲಾಖೆಯಿಂದ ಘಟನೋತ್ತರ ಅನುಮತಿ ನೀಡುವುದಿಲ್ಲ.
12. ಸಿಸಿಟೆಕ್ ಉಪಘಟಕಗಳು ಇಲಾಖೆಯ ಅನುಮೋದನೆ ಪಡೆಯದೆ, ಅಲ್ಪಾವಧಿ ತರಬೇತಿಗಳನ್ನು ನಡೆಸುತ್ತಿರುವುದು ಕಂಡುಬಂದಲ್ಲಿ ಸಿಸಿಟೆಕ್ ಉಪಘಟಕದ ಮಾನ್ಯತೆಯನ್ನು ರದ್ದುಪಡಿಸಲಾಗುವುದು.
13. ಸಿಸಿಟೆಕ್ ಉಪಘಟಕಗಳು ಇಲಾಖೆಯ ಅನುಮೋದನೆ ಪಡೆದು, ಅಲ್ಪಾವಧಿ ತರಬೇತಿಗಳನ್ನು ನಿಯಮಾನುಸಾರ ನಡೆಸದಿರುವುದು ಕಂಡುಬಂದಲ್ಲಿ, ಸಿಸಿಟೆಕ್ ಉಪಘಟಕದ ಮಾನ್ಯತೆಯನ್ನು ರದ್ದುಪಡಿಸಲಾಗುವುದು.
14. ಅಲ್ಪಾವಧಿ ತರಬೇತಿ ನಡೆಸಲಾದ ಒಂದು ತಿಂಗಳೊಳಗಾಗಿ ತರಬೇತಿಯ ಸಲುವಾಗಿ ಪಡೆದ ಶುಲ್ಕ ಖರ್ಚು ವೆಚ್ಚಗಳ ಪಟ್ಟಿಯ ಸಮೇತ ಭಾಗವಹಿಸಿದ ಅಭ್ಯರ್ಥಿಗಳ ಪಟ್ಟಿ ಹಾಗೂ ತರಬೇತಿಯಲ್ಲಿ ಹಾಜರಿದ್ದ ಅಭ್ಯರ್ಥಿಗಳಿಗೆ ನೀಡಿದ ತರಬೇತಿ ಪ್ರಮಾಣ ಪತ್ರದ ಪಟ್ಟಿಯೊಂದಿಗೆ ಸಮಗ್ರ ವರದಿಯನ್ನು ಹಾಗೂ ಲಾಭಾಂಶದ ಶೇ.25ರ ಮೊತ್ತವನ್ನು ಡಿ.ಡಿ. ಮೂಲಕ ತಾಂತ್ರಿಕ ಶಿಕ್ಷಣ ಇಲಾಖೆಯ/ಕಾರ್ಯದರ್ಶಿಗಳು, ನಿರಂತರ ತಾಂತ್ರಿಕ ಶಿಕ್ಷಣ ಕೇಂದ್ರ ಬೆಂಗಳೂರು ಇವರ ಹೆಸರಿಗೆ ಸಂದಾಯವಾಗುವಂತೆ ಕಳುಹಿಸಿಕೊಡಲು ಸೂಚಿಸಲಾಗಿದೆ.

ಮುಂದುವರೆದು, ಇಲಾಖೆಯೊಂದಿಗೆ ಯಾವುದೇ ರೀತಿಯ ಪತ್ರವ್ಯವಹಾರ ನಡೆಸುವಾಗ ಆಂಗ್ಲ ಭಾಷೆಯಲ್ಲಿ ವ್ಯವಹರಿಸದೆ, ಕಡ್ಡಾಯವಾಗಿ ಕನ್ನಡದಲ್ಲೇ ವ್ಯವಹರಿಸುವಂತೆ ಹಾಗೂ ಪ್ರಸ್ತಾವನೆ ಜೊತೆ ಲಗತ್ತಿಸುವ ಅನುಬಂಧಗಳನ್ನು ಸಹ ಕನ್ನಡದಲ್ಲೇ ನೀಡುವಂತೆ ಕ್ರಮ ವಹಿಸಲು ಪ್ರಾಚಾರ್ಯರಿಗೆ ಈ ಮೂಲಕ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:-

1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು, ಡಿ.ಟಿ.ಇ. ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.